# ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಅಥಣಿ

---

**ಸಿ.ಸಿ.ನಂ : 2264 /2017** ದಿನಾಂಕ : **13.12.2023**
**ಸಿ. ಡಬ್ಲೂ : 9**
**ಪಿಡಬ್ಲೂ : 5**

---

| | | |
|---|---|---|
| ಸಾಕ್ಷಿದಾರರ ಹೆಸರು | : | ಎಮ್ ವಿ ಪೂಜಾರಿ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಶೇತ್ಕಿ |
| ವಾಸಸ್ಥಳ | : | ಶಿವನೂರು |
| ದಿನಾಂಕ | : | 13.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

---

* * *

ಮುಖ್ಯ ವಿಚಾರಣೆ ಸ.ಸ.ಅ. ವಕೀಲರವರಿಂದಃ

ಸಾಕ್ಷಿಯು ದೂಡಿನ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ಈಗಾಗಲೇ ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ನನಗೆ ಚಾಸಾ 1 ರವರು ದೂರನ್ನು ಬರೆಯಲು ಹೇಳಿದ್ದರು, ಅದರಂತೆ ನಾನು ನಿಪಿ 2 ನ್ನು ಬರೆದಿರುತ್ತೇನೆ. ಆರೋಪಿತರು ಚಾಸಾ 1 ರವರ ಜಮೀನಿಗೆ ಬಂದು , ಬಾವಿಯ ಮೋಟಾರನ್ನು ಕಿತ್ತು ಎರಡು ಮೋಟಾರ ಗಳನ್ನು ಬಾವಿಯಲ್ಲಿ ಎಸೆದಿದ್ದರು. ಆರೋಪಿತರು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಕುರಿತು ಬರೆದಿರುತ್ತೇನೆ. ರೂ. 40,000/- ದ ಮೋಟಾರ ನಷ್ಟವಾದ ಕುರಿತು ಬರೆದಿರುತ್ತೇನೆ. ನಾನು ನಿಪಿ2 ನ್ನು ಬರೆದಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಮ್ ಡಿ ಕೆ ವಕೀಲರಿಂದಃ

ನಾನು ಬಿ ಎ ಪದವಿದರನಾಗಿರುತ್ತೇನೆ. ಚಾಸಾ 1 ನನ್ನ ಚಿಕ್ಕಪ್ಪನ ಮಗ ಇರುತ್ತಾರೆ. ನೀವು ಘಟನಾ ಸಮಯ ಮತ್ತು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಚಾಸಾ 1 ರವರು ನನ್ನನ್ನು ಕರೆದುಕೊಂಡು ಬಂದಿರಲಿಲ್ಲ , ನಾನೇ ಠಾಣೆಯ ಮುಂದೆ ಹೋಗುತ್ತಿದ್ದೆನು. ಚಾಸಾ 1 ರವರು ಹೇಳಿದ ಹಾಗೆ ನಾನು ಬರೆದಿರುತ್ತೇನೆ. ನೀವು ಶಾಲೆ ಕಲಿತಿರುವುದರಿಂದ ನಿಮಗೆ ತಿಳಿದ ವಿಷಯವನ್ನು ಸಹ ನಿಪಿ 2 ರಲ್ಲಿ ಬರೆದಿರುತ್ತೀರಿ ಎಂದರೆ ಸರಿಯಲ್ಲ.

ಚಾಸಾ 1 ರವರು ಹೇಳಿದ ಹಾಗೆ ನಿಪಿ 2 ನ್ನು ಬರೆದಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ 2 ರ ವಿಷಯಗಳು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಪರಿಚಯ ನನಗೆ ಇರುತ್ತದೆ. ಆರೋಪಿತರ ಮತ್ತು ನಿಮ್ಮ ನಡುವೆ ಆಗಿಂದ್ದಾಗ್ಗೆ ಜಗಳಗಳು ಆಗುತ್ತಿದ್ದವು ಎಂದರೆ ಸರಿಯಲ್ಲ. ನೀವು ಚಾಸಾ 1 ರವರಿಗೆ ಸಹಾಯ ಮಾಡಬೇಕೆಂದು ಸುಳ್ಳು ಹೇಳಿಕೆಯನ್ನು ಬರೆದು, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ